# ಹೊಸ ಅನುಭೂತಿ ಕೊಡುವ ಸಂಕಲನ

'ಚಿತ್ರದ ಕುದುರೆ' ಕೃತಿಯ ಆರಂಭದಲ್ಲೇ ಅದರ ಲೇಖಕ ಕೆ.ವಿ. ಅಕ್ಷರ ಅವರು ಈ ಚಿತ್ರದ ಕುದುರೆ ರೂಪಕದ ಬಗ್ಗೆ ಹೇಳುತ್ತಾರೆ. ಅದನ್ನು ನಾನು ಅರ್ಥೈಸಿಕೊಂಡಿದ್ದು ಹೀಗೆ. ಇವತ್ತು ನಮಗೆ ಜ್ಞಾನಸಂಗ್ರಹಕ್ಕೆ ಬೇಕಾದ ಮಾಹಿತಿ, ಮುದಗೊಳಿಸುವ ಮನರಂಜನೆ, ನಮ್ಮದೇ ಅಭಿವ್ಯಕ್ತಿಗೆ ಬೇಕಾದ ಮಾಧ್ಯಮ ಎಲ್ಲವೂ ಆಯ್ಕೆ ಮಾಡಬಲ್ಲಷ್ಟು, ಆಯ್ಕೆ ಕಷ್ಟವಾಗುವಷ್ಟು ವಿಪುಲವಾಗಿವೆ. ಆದರೆ ಈ ಬಾಹುಳ್ಯ ನಿರ್ಮಿಸಿದ ಜಗತ್ತು, ಅದೇ ಕಾರಣಕ್ಕೆ ಒಂದು ಉದ್ವೇಗ–ಆವೇಗವನ್ನೂ ಸೃಷ್ಟಿಸಿದೆ. ಅದಕ್ಕೆ ಕಾರಣ, ಸ್ಪರ್ಧೆಯಿಂದ, ಒತ್ತಡದಿಂದ, ಸಮಯಾಭಾವದಿಂದ ಹುಟ್ಟಿದ ತುರ್ತುಸ್ಥಿತಿ. ನಿಧಾನ, ಸಮಾಧಾನ, ಸಾವಧಾನ ಇಲ್ಲದ ಓಟ ನಾವೇನು ಮಾಡುತ್ತಿದ್ದೇವೆ, ಎಲ್ಲಿದ್ದೇವೆ, ಏನಾಗುತ್ತಿದೆ ಎಂಬ ವಿವೇಚನೆ, ಪ್ರಜ್ಞೆ, ಸೂಕ್ಷ್ಮಗಳನ್ನು ಕೊಲ್ಲುತ್ತದೆ. ಇದೇನು ಭ್ರಮೆಯೋ, ಕನಸೋ, ಚಿತ್ತವಿಕಲ್ಪವೋ, ಕಲ್ಪನೆಯೋ, ವಾಸ್ತವವೋ ನಮಗೇ ತಿಳಿಯದ ಹಾಗೆ ಧಾವಂತದಲ್ಲೇ ಬದುಕುತ್ತ ಅದನ್ನು ಕಳೆಯುತ್ತೇವೆ. ಈ ಸ್ಥಿತಿ ಇವತ್ತಿನ ಆಧುನಿಕ ಮನುಷ್ಯನದ್ದು ಎಂದವರು ಹೇಳುತ್ತಿರುವಂತಿದೆ.




ಚಿತ್ರದ ಕುದುರೆ
ಲೇ: ಕೆ.ವಿ. ಅಕ್ಷರ
ಪ್ರ: ಅಕ್ಷರ ಪ್ರಕಾಶನ,
ಹೆಗ್ಗೋಡು

ಹೆಗ್ಗೋಡಿನಂಥ ಒಂದು ವಾತಾವರಣದಲ್ಲಿರುತ್ತ, ಅಸಾಹಿತ್ಯಿಕ ವಲಯದ ಮನುಷ್ಯನಾಗಿ, ರಂಗಕರ್ಮಿಯಾಗಿ, ಕುರಿತಿಟ್ಟು ಮನುಷ್ಯನ ನಾಟಕೀಯ ಒಲವುಗಳ ಸೂಕ್ಷ್ಮ ಕಾಣಬಲ್ಲ ಅಕ್ಷರ ಅವರಿಗೆ ನಾವೆಲ್ಲ ಕಾಣುತ್ತಿರುವುದನ್ನು ಕೊಂಚ ಅಂತರದಿಂದ ಕಾಣಬಲ್ಲ ಸಾಧ್ಯತೆ ಇರುವುದರಿಂದ ಸ್ಪಷ್ಟತೆ ಇರುವುದು ಸಹಜ, ಸುಲಭ ಮತ್ತು ಸಾಧ್ಯ. ಈ ವರ್ಷ ಅವರು ಎರಡು ಕೃತಿಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ ಒಂದು, 'ಚಿತ್ರದ ಕುದುರೆ' ಪುಸ್ತಕ. ಕಳೆದ ಏಳೆಂಟು ವರ್ಷಗಳಿಂದ ಅವರು ಬರೆದ ಬರಹಗಳು ಇಲ್ಲಿವೆ. ಇವುಗಳಲ್ಲಿ ನಿರ್ದಿಷ್ಟ ರೂಪದ ಏಕಸೂತ್ರತೆ ಇಲ್ಲ ಎಂದು ಅವರೇ ಹೇಳಿಕೊಂಡಿದ್ದಾರೆ.

ಒಂದಿಷ್ಟು ಮುನ್ನುಡಿಗಳು ಅಥವಾ ಅವಲೋಕನ, ಅಕ್ಷರ ಅವರಿಗೇ ವಿಶಿಷ್ಟವಾದ ಬಗೆಯ, ಅಪೂರ್ವವೆನಿಸುವ, ನಾವು ಅಷ್ಟಾಗಿ ಕೇಳಿರದ ವ್ಯಕ್ತಿಗಳ ಕುರಿತು ಬರೆದ ಒಂದಿಷ್ಟು ವ್ಯಕ್ತಿಚಿತ್ರಗಳು ಇಲ್ಲಿವೆ. ಇವನ್ನು ಮೀರಿ, ಈ ಕೃತಿಯ ಮಹತ್ವವನ್ನು ಎತ್ತಿ ಹಿಡಿಯುವ ಬರಹಗಳು ಬಹಳ ಮುಖ್ಯವಾದವು. ಕನ್ನಡಕ್ಕೆ ಹಲವು ವಿಧದಲ್ಲಿ ದಕ್ಕಿದ 'ಕನ್ನಡದ ಶೇಕ್ಸ್‌ಪಿಯರ್' ಎಂಬ ಪರಿಕಲ್ಪನೆಯೊಂದಿಗೆ ಬರೆದ ಲೇಖನ, ಸಂಸ್ಕೃತ–ತೆಲುಗು ಚತುರಕವಿತೆಗಳ ಸುತ್ತ ತೊಡಗಿ ಭರ್ತೃಹರಿ, ದರ್ಶನಗಳು ಎಂದೆಲ್ಲ ಸಾಗುವ ಭಾಷಿಕ ಜಿಜ್ಞಾಸೆಯ ಬರಹ, 'ರುಚಿಯ ರಾಜಕಾರಣಕ್ಕೆ ರಸದ ಪ್ರತಿರೋಧ' ಎನ್ನುವ ಹೆಸರಿನಲ್ಲಿ ಬರೆದ, 'ಅಡುಗೆಮನೆ ಜಗತ್ತು' ವಿಚಾರಸಂಕಿರಣವೇ ಮೂಲವಾಗಿ ಹುಟ್ಟಿದ ಒಂದು ವಿಶಿಷ್ಟ ಪ್ರಬಂಧ, 'ಕವಿತೆ ಎಂದರೆ ಏನರಿ? ವಿನಯ ವಿಸ್ಮಯ ವೈಖರಿ' ಎಂದ ಪುತಿನ ಅವರ ಮಾತೇ ಸ್ಫೂರ್ತಿಯಾಗಿ ಹುಟ್ಟಿದ ಒಂದು ವಿಚಾರಲಹರಿ, ಗಾಂಧಿ ಆತ್ಮಕಥಾನಕದ ಹಿಂದಿರುವ ರೂವಾರಿ 'ಅಂತರ್ಯಾಮಿ'ಯ ಕುರಿತ ಜಿಜ್ಞಾಸೆ, ಅಭಿವೃದ್ಧಿ–ವಿಕಾಸ ಮತ್ತು ಪ್ರಗತಿಯ ಹಿನ್ನೆಲೆಯಲ್ಲಿ ಗ್ರಾಮ–ನಗರ ಪರಿಕಲ್ಪನೆ ಕುರಿತ ಲೇಖನ, ಲಘು ಧಾಟಿಯಲ್ಲಿ